ವಿಷಯ :– ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್‌ಚ್ಛಕ್ತಿ ಅಭಾವ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 475 (954)

ಶ್ರೀ ಬಿ. ಹೆಚ್. ಯಂಕಾ ನಾಯಕ (ಹರಪನಹಳ್ಳಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿ ವಿದು ಚ್ಛಕ್ತಿ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಆ) ಸದರೀ ತಾಲ್ಲೂಕಿನಲ್ಲಿ ಸುಮಾರು 900 ಕ್ಕೂ ಹೆಚ್ಚು ಕೊಳವೆ ಬಾವಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಸಾರ್ವಜನಿಕರು ಅರ್ಜಿ ಸಲ್ಲಿಸಿರುವುದು ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸದರೀ ಕಾರ್ಯಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಹೌದು, ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ಹರಪನಹಳ್ಳಿಯ 66 ಕೆ. ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಹಾಲಿ ಇರುವ 5 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಸ್ಥಾನದಲ್ಲಿ 8 ಅಥವಾ 12.5 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವುದು. ಇದರಿಂದ ಉಪ ವಿದ್ಯುತ್ ಕೇಂದ್ರದ ಸಾಮರ್ಥ್ಯ ಹೆಚ್ಚುವುದು.

2) ತೆಲ್ಲ ಮತ್ತು ಪುನಬಘಟ್ಟಗಳಲ್ಲಿ ಹೊಸ ಉಪ ವಿದು ತ್ ಕೇಂದ್ರಗಳ ಸ್ಥಾಪನೆ. ಅಲ್ಲದೇ ಹಲವಾಗಲೆ ಅರಸೀಕೆರೆಗಳಲ್ಲಿ ಹೊಸ ಉಪ ವಿದ್ಯುತ್ ಕೇಂದ್ರಗಳ ಸ್ಥಾಪನೆ ಬಗ್ಗೆ ಪ್ರಸ್ತಾವನೆಗಳನ್ನು ಪರಿಶೀಲಿಸ ಲಾಗುತ್ತಿದೆ.

ಆ) ಈ ತಾಲ್ಲೂಕಿನಲ್ಲಿ ಹಾಲಿ 504 ಆರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿವೆ.

ಇ) ಈ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣವನ್ನು ತೀವ್ರಗೊಳಿಸುವ ಸಲುವಾಗಿ ಈ ಸಾಲಿನ ವಾರ್ಷಿಕ ಗುರಿಯನ್ನು 300 ರಿಂದ 600 ಕ್ಕೆ ಹೆಚ್ಚಿಸಲಾಗಿದೆ. ಈ ಗುರಿಯನ್ನು ಮಾರ್ಚ್ 1991 ರ ಅಂತ್ಯದ ವೇಳೆಗೆ ಸಾಧಿಸಲು, ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ವಿಷಯ :– ರಾಜ್ಯದಲ್ಲಿ ಅಣು ಸ್ಥಾವರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 476 (694)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಣುಸ್ಥಾವರಗಳನ್ನು ಸ್ಥಾಪನೆ ಮಾಡುವ ಕಾರ್ಯ ನಡೆದಿರುವವುಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಹೆಸರೇನು ?

ಆ) ರಾಜ್ಯಕ್ಕೆ ಇರುವ ವಿದ್ಯುತ್ ಕೊರತೆಯನ್ನು ಸಮಗ್ರವಾಗಿ ನಿವಾರಿಸಲು ಕೈಗೊಂಡ ಕ್ರಮವೇನು ಹಾಗೂ ಎರಡು ಸಾವಿರ ಇಸವಿಗೆ ಬೇಕಾಗುವ ವಿದ್ಯುತ್ ಪ್ರಮಾಣವೆಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ನಿರ್ಮಾಣ ಹಂತದಲ್ಲಿರುವ (ನೂ ಕ್ಲಿಯರ್) ಅಣು ವಿದ್ಯುತ್ ಕೇಂದ್ರಗಳು :

1) ಕೈಗಾ. ಅಣುವಿದ್ಯುತ್ ಕೇಂದ್ರ : 1 ನೇ ಹಂತ ಸಾಮರ್ಥ್ಯ : 2 × 235 = 470 ಮೆ. ವ್ಯಾ. ವಾರ್ಷಿಕ ಉತ್ಪಾದನೆ : 2,676 ಮಿ. ಯೂ.

ಆ) ಈಗ ಕೆಲಸ ನಡೆಯುತ್ತಿರುವ ಹಾಗೂ ಮುಂದೆ ಕೆಗೆತ್ತಿಕೊಳ್ಳಬೇಕಾದ ಯೋಜನೆಗಳ ಮುಕ್ತಾಯವಾದಾಗ 2,000 ನೇ ಇಸವಿಗೆ ರಾಜ್ಯದ ಒಟ್ಟು ಸಾಮರ್ಥ್ಯ 6,287 ಮೆ.ವ್ಯಾ. ಗಳಷ್ಟಾಗುತ್ತದೆ ಮತ್ತು ವಾರ್ಷಿಕ ಉತ್ಪಾದನೆ 2.5868.8 ಮಿ. ಯೂನಿಟ್‌ಗಳಷ್ಟಾಗುತ್ತದೆ. ಕರ್ನಾಟಕ ಸರ್ಕಾರದ ಅಂದಾಜಿನ ಪ್ರಕಾರ ಆ ಅವಧಿಗೆ ಬೇಡಿಕೆ 7,200 ಮೆ ವ್ಯಾ. ಆಗುತ್ತದೆ ಮತ್ತು ವಾರ್ಷಿಕ ಉತ್ಪಾದನೆ 35,000 ಮಿ. ಯೂನಿಟ್ ಆಗಬೇಕಾಗುತ್ತದೆ.